# ಹೊಳಲ್ಕೆರೆಯಲ್ಲಿ ಮೆಡಿಕಲ್ ಮತ್ತು ಆಹಾರ ಕಿಟ್ ಗಳ ವಿತರಣೆ

**ಚಿತ್ರದುರ್ಗ ಮೇ - 22** : ಹೊಳಲ್ಕೆರೆಯ ಎಸ್.ಜೆ.ಎಂ. ಪ್ರೌಢಶಾಲೆ ಆವರಣದಲ್ಲಿ ಮತ್ತು ಪ್ರವಾಸಿ ಮಂದಿರದಲ್ಲಿ ಇಂದು ಡಾ. ಶಿವಮೂರ್ತಿ ಮುರುಘಾ ಶರಣರ ಸಾನ್ನಿಧ್ಯದಲ್ಲಿ ಮೆಡಿಕಲ್ ಕಿಟ್ ಮತ್ತು ಆಹಾರ ಕಿಟ್‌ಗಳನ್ನು ವಿತರಿಸಲಾಯಿತು. ಕಾರ್ಯಕ್ರಮದಲ್ಲಿ ಶಾಸಕ ಎಂ.ಚಂದ್ರಪ್ಪ, ಜಿ.ಪಂ. ಸದಸ್ಯ ತಿಪ್ಪೇಸ್ವಾಮಿ, ಜಿ.ಪಂ. ಮಾಜಿ ಅಧ್ಯಕ್ಷ ಎಲ್.ಬಿ.ರಾಜಶೇಖರ್, ಪಟ್ಟಣ ಪಂಚಾಯಿತಿ ಸದಸ್ಯ ಕೆ.ಸಿ.ರಮೇಶ್, ಪ.ಪಂ. ಮಾಜಿ ಅಧ್ಯಕ್ಷ ಅಲೀಮುಲ್ಲಾ ಷರೀಫ್ ಭಾಗವಹಿಸಿದ್ದರು.ಕಿಟ್‌ಗಳ ಪ್ರಾಯೋಜಕತ್ವವನ್ನು ಪ.ಪಂ. ಸದಸ್ಯ ಹೆಚ್.ಮುರುಗೇಶ್ ಮತ್ತು ಮಹಂತೇಶ್ ವಹಿಸಿಕೊಂಡಿದ್ದರು. ಪ.ಪಂ. ಮುಖ್ಯಾಧಿಕಾರಿಗಳು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.





